Eradication of Corruption

*Q.—202. SRI A. J. DODDAMETI (Ron).—

Will the Government be pleased to state :—

the steps taken to eradicate corruption among the non-officials ?

A.—SRI VEERENDRA PATIL (Minister for Public Works) [on behalf of SRI S. NIJALINGAPPA (Chief Minister)[.—

Steps taken to eradicate corruption among the non-officials consist of enforcement of the relevant provisions of the law under the Indian Penal Code and the Prevention of Corruption Act.

ಶ್ರೀ ಎ. ಜೆ. ದೊಡಮೇಟಿ.—ಮೊದಲನೇ ಪ್ರಶ್ನೆಗೆ ಉತ್ತರವಾಗಿ ರಾಜ್ಯದ ಜಾಗೃತ ಆಯೋಗದ ಕಮೀಷನರು ತಮ್ಮ ವಿದೇಶೀ ಪ್ರವಾಸವನ್ನು ಮುಗಿಸಿದ ನಂತರ ಭ್ರಷ್ಟಾಚಾರವನ್ನು ಪರಿಣಾಮಕಾರಿಯಾಗಿ ತಡೆಗಟ್ಟುವ ಬಗ್ಗೆ ಸರ್ಕಾರದವರಿಗೆ ಕೊಟ್ಟಿರುವ ವರದಿಯನ್ನು ಪರಿಶೀಲಿಸಲಾಗುತ್ತದೆ ಎಂದು ಹೇಳಿದ್ದಾರೆ. ಆ ವರದಿಯ ಸಾಮಾನ್ಯ ಸ್ವರೂಪ ಏನು, ಆ ವರದಿಯ ಸರ್ಕಾರಕ್ಕೆ ತಲುಪಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ವಿಜಿಲೆನ್ಸ್ ಕಮೀಷನರಿಂದ ಚೀಫ್ ಸೆಕ್ರೆಟರಿಯವರಿಗೆ 1-11-1965ರಲ್ಲಿ ಒಂದು ಪತ್ರ ಬಂದಿದೆ.

ಶ್ರೀ ಎ. ಜೆ. ದೊಡ್ಡಮೇಟಿ.—ನಾನು ಕೇಳಿದ್ದು ವಿಜಿಲೆನ್ಸ್ ಕಮೀಷನರು ಇಂಥಿಂಥಾದ್ದು ಮಾಡಬೇಕು ಎಂದು ವರದಿಯಲ್ಲಿ ಕೊಟ್ಟಿದ್ದಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ನಾನುಹೇಳಿದೆ. 1-11-1965ರಲ್ಲಿ ವಿಜಿಲೆನ್ಸ್ ಕಮೀಷನರು ಚೀಫ್ ಸೆಕ್ರೆಟರಿಯವರಿಗೆ ಒಂದು ಪತ್ರವನ್ನು ಬರೆದಿದ್ದಾರೆಂದು. ಅವರು ಅಂತರರಾಷ್ಟ್ರೀಯ ಸ್ಕೌಟ್ ಹಾಗೂ ಗೈಡ್ಸ್ ಕಾನ್‌ಫರೆನ್ಸಿಗೆ ಬ್ರೆಜಿಲ್ಲಿಗೆ ಹೋಗಿದ್ದರು. ಅವರು ಹಾಗೆಯೇ ಸ್ಕಾಂಡಿನೇವಿಯಾಗೂ ಭೇಟಿನೀಡಿ ಅಲ್ಲಿ ಲಂಚ ಗೂಳಿತನವನ್ನು ಮತ್ತು ಭ್ರಷ್ಟಾಚಾರವನ್ನೂ ಯಾವರೀತಿ ಕಡಿಮೆ ಮಾಡಬೇಕೆಂಬ ಬಗ್ಗೆ "ಓಂಬುಡ್ಸ್‌ಮನ್" ಪದ್ಧತಿಯನ್ನು ಸ್ಟಡಿಮಾಡಿಕೊಂಡು ಅಲ್ಲಿ ಏನಿದೆ, ನಮ್ಮ ದೇಶದಲ್ಲಿ ಏನುಮಾಡಬೇಕೆಂಬ ಬಗ್ಗೆ ಚೀಫ್ ಸೆಕ್ರೆಟರಿಯವರಿಗೆ ಒಂದು ಪತ್ರವನ್ನು ಬರೆದಿದ್ದಾರೆ. ಈ ವಿಷಯವು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ. ಇದರ ಬಗ್ಗೆ ಒಂದೊಂದು ಸರ್ಕಾರ ಪ್ರತ್ಯೇಕವಾಗಿ ಮಾಡುವಂಥಾದ್ದಲ್ಲ. ಈ ವಿಚಾರವನ್ನು ಕೇಂದ್ರ ಸರ್ಕಾರ ದವರು ಈಗಾಗಲೇ ವಿಚಾರ ಮಾಡುತ್ತಿದ್ದಾರೆ. ಅವರು ಯಾವ ರೀತಿ ನಿರ್ಣಯವನ್ನು ತೆಗೆದುಕೊಳ್ಳುತ್ತಾರೆಯೋ ಅದನ್ನು ನೋಡಿ ನಾವು ಅದರಂತೆ ಪರಿಪಾಲನೆ ಮಾಡುತ್ತೇವೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ರಾಜ್ಯದಲ್ಲಿ ಖಾಸಗೀ ಜನಗಳಲ್ಲಿರುವಂತಹ ಭ್ರಷ್ಟಾಚಾರವನ್ನು ನಿಲ್ಲಿಸದಿದ್ದರೆ ಅಡಳಿತದಲ್ಲಿ ಭ್ರಷ್ಟಾಚಾರವನ್ನು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ ಎಂಬುದನ್ನು ತಾವು ಮನಗಂಡಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್.—ಇದು ನಮ್ಮ ಅಭಿಪ್ರಾಯವನ್ನು ಹೇಳುವ ಪ್ರಶ್ನೆಯಲ್ಲ. ಇದರ ಬಗ್ಗೆ ಏನಾಗಿದೆ ಎಂಬುದನ್ನು ನಾನು ಹೇಳಿದ್ದೇನೆ.

SRI R. M. DESAI.—Will the Report be made available to the Members, Sir ?

SRI VEERENDRA PATIL.—There is no such report. He has written a letter explaining the salient features of that Institution. I just said that to create such an Institution in our country, is already engaging the attention of the Government of India. It is a big problem to the State to think and act independently. Whatever decision that is taken by the Government of India, will be followed by us.

SRI S. M. KRISHNA.—Does not the Government expect a periodical report from the Vigilance Commission and if so, would the Government place the report on the Table so that we can have an opportunity to discuss the report ?

SRI VEERENDRA PATIL.—I require notice.

ಶ್ರೀ ಎ. ಜೆ. ದೊಡ್ಡಮೇಟಿ.—ಭಾರತದ ದಂಡಪ್ರಕ್ರಿಯಾ ಸಂಹಿತೆಯ ಪ್ರಕಾರ ಅಧಿಕಾರೇತರ ಭ್ರಷ್ಟಾಚಾರ ಆಪಾದನೆ ಬಗ್ಗೆ ಕ್ರಮಗಳನ್ನು ತೆಗೆದುಕೊಂಡಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್.—ಅನೇಕ ಜನ ಸೊಸೈಟಿಗಳ ಅಧ್ಯಕ್ಷರುಗಳು ಮುಂತಾದ ಅಧಿಕಾರೇತರರ ಮೇಲೆ ಹಣದ ಅಪವ್ಯಯ ಮತ್ತು ಭ್ರಷ್ಟಾಚಾರದ ಆಪಾದನೆಗಳು ಬಂದಾಗ ಕರಪ್ಷನ್ ಆಕ್ಟ್ ಪ್ರಕಾರ ಅವರ ಮೇಲೆ ಕ್ರಮವನ್ನು ತೆಗೆದುಕೊಂಡಿದೆ. ಅನೇಕರನ್ನು ಪ್ರಾಸಿಕ್ಯೂಟ್ ಮಾಡಿದೆ. ಮತ್ತು ಅನೇಕರಿಗೆ ಶಿಕ್ಷೆಯಾಗಿದೆ.

ಶ್ರೀ ಎ. ಜೆ. ದೊಡ್ಡಮೇಟಿ.—ಇಂಡಿಯನ್ ಪಿನಲ್ ಕೋಡ್ ಪ್ರಕಾರ ಅಧಿಕಾರೇತರರ ಭ್ರಷ್ಟಾಚಾರವನ್ನ ತಡೆಯುವುದಕ್ಕೆ ಸಾಕಷ್ಟು ಸಾಮರ್ಥ್ಯವಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಅಧಿಕಾರೇತರರು ಎಂದರೆ ಶಾಸಕರು, ಮಂತ್ರಿಗಳು ಮುಂತಾದವರೆಲ್ಲರೂ ಸೇರುತ್ತಾರೆ. ಅಧಿಕಾರೇತರರ ಮೇಲೆ ಲಂಚಗೂಳಿತನ ಮತ್ತು ಭ್ರಷ್ಟಾಚಾರದ ಆಪಾದನೆಗಳು ಬಂದರೆ ಅವರಿಗೆ ಶಿಕ್ಷೆ ಮಾಡಬೇಕಾದರೆ ಯಾವುದಾದರೂ ಒಂದು ಕಾನೂನಿನ ಪ್ರಕಾರ ಅವರಿಗೆ ಶಿಕ್ಷೆಮಾಡಬೇಕಾಗುತ್ತದೆ. ಆದ್ದರಿಂದ ಶಾಸಕರು ಮಂತ್ರಿಗಳು ಮುಂತಾದ ಅಧಿಕಾರೇತರರಲ್ಲಿರುವ ಭ್ರಷ್ಟಾಚಾರ ನಿರ್ಮೂಲಕ್ಕೆ ಕಾನೂನನ್ನು ಮಾಡುವುದಕ್ಕೆ ಬದಲು ಸೆಲ್ಫ್-ಇಂಪೋಜ್ಡ್ ಕೋಡ್ ಆಫ್ ಕಾಂಡಕ್ಟನ್ನು ಹಾಕಿಕೊಂಡು ಆ ರೀತಿ ಎಲ್ಲರೂ ನಡೆಯಬೇಕಾಗುತ್ತದೆ. ಇದರಲ್ಲಿ ಎಲ್ಲರೂ ಕರಪ್ಟ್ ಇದ್ದಾರೆ ಎಂದು ಮಾತನಾಡುವುದರಲ್ಲಿ ಅರ್ಥವಿಲ್ಲ.

1-30 P.M.

SRI S. M. KRISHNA.—In view of the fact that corruption at the non-official level . . .

MR. SPEAKER.—What kind of corruption ?

SRI S. M. KRISHNA.—Political corruption it is after 1957 that we have to coin a new phrase for it. In view of the prevailing corruption at all levels in Co-operative Societies and in various statutory boards like the Khadi Board, etc., would not these problems be solved if the Vigilance Commissioner could go in to these questions also or if the jurisdiction of the Vigilance Commission Directoratec ould be made all-pervading so that Ministers, Legislators and various other people also could be dealt with ?

MR. SPEAKER.—A new concept in jurisprudence. Can the Vigilance Commission punish if the law does not permit or sanction any punishment. Sri Kadam .

SRI R. N. LAKSHMIPATHY.—I have put the main question.

ಒಂದು ಪ್ರಶ್ನೆ ಕೇಳಿ ಕುಳಿತುಕೊಂಡು ಬಿಟ್ಟೆ. ಆ ಮೇಲೆ ನನಗೆ ಅವಕಾಶವೇ ದೊರೆತಿಲ್ಲ.

MR. SPEAKER.—Just because he has sent the question, does he think that he is solely entitled to put questions and none others ? Should I brush aside the other members ?

SRI R. N. LAKSHMIPATHY.—The Chair must prevent them.

MR. SPEAKER.—It is something which even if Sri Lakshmipathi, request, I am not going to do. The Hon. Member should have a little patience. It will do him no harm.

SRI B. P. KADAM.—Is it not a fact that corruption amongst non-officials is considered as the necessary qualification to rise in stature in public life and politics ?

MR. SPEAKER.—I disallow it.

SRI VEERENDRA PATIL.—That is so, according to the Member.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ತಾವು ವ್ಯಕ್ತಿಗಳಿಗೂ ನೀತಿನಿಯಮಾವಳಿಗಳು ಹಾಕಬೇಕು ಎನ್ನುವುದನ್ನು ಒಪ್ಪಿಕೊಳ್ಳಲೇಬೇಕು, ಈ ರೀತಿ ಇದ್ದ ಪಕ್ಷದಲ್ಲಿ 100ಕ್ಕೆ 90 ಜನ ದರಿದ್ರರು ಕುಬೇರರಾಗುತ್ತಿರಲಿಲ್ಲ.....

MR. SPEAKER.—Supplementaries must be pointed, if the Member wants replies.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ದಿನೇ ದಿನೇ ಭ್ರಷ್ಟಾಚಾರ ಎಂಬುದು ಜಾಸ್ತಿಯಾಗುತ್ತಾ, ಇದೆ Ombudsmen ನಂತ ನಮ್ಮ ವಿಜಿಲೆನ್ಸ್ ಕಮೀಷನ ಅವರನ್ನು ಅಧಿಕಾರೇತರರಲ್ಲಿರುವ ಭ್ರಷ್ಟಾಚಾರದ ಬಗ್ಗೆ ಕ್ರಮ ತೆಗೆದುಕೊಳ್ಳಲು ಸಲಹೆ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ದಿನೇ ದಿನೇ ಕರಪ್ಷನ್ ಹೆಚ್ಚತ್ತಿದೆ ಎನ್ನುವುದನ್ನು ನಾನು ಒಪ್ಪುವುದಿಲ್ಲ. ಕರಪ್ಷನ್ ಬಗ್ಗೆ ಮಾತನಾಡುತ್ತಿರುವುದು ಹೆಚ್ಚು ಹೆಚ್ಚು ಆಗುತ್ತಿದೆ ಅನ್ನುವುದನ್ನು ಮಾತ್ರ ನಾನು ಒಪ್ಪುತ್ತೇನೆ. ಅವರು ಹೇಳಿದಂಥ ರೀತಿಯಿಂದ ಕರಪ್ಷನ್ ಇಲ್ಲ.—ಮಂತ್ರಿಗಳ ಮೇಲೆ, ಎಮ್. ಎಲ್. ಎ. ಗಳ ಮೇಲೆ ಮತ್ತು ಪ್ರತಿಯೊಬ್ಬರ ಮೇಲೂ ವಿಚಾರಣೆ ಮಾಡುವುದಕ್ಕೆ ಜೂರಿಸ್‌ಡಿಕ್ಷನ್ನನ್ನು ಸ್ಕಾಂಡಿನೇವಿಯನ್ ದೇಶಗಳಲ್ಲಿರುವ Ombudsmen ಗೆ ಕೊಟ್ಟಿರುವಂತೆ ಆ ರೀತಿ ಅಧಿಕಾರ ಕೊಟ್ಟಿಲ್ಲ. ಈಗ ಮೋರಾರ್ಜಿ ದೇಸಾಯಿಯವರ ಅಧ್ಯಕ್ಷತೆಯಲ್ಲಿ ಒಂದು ಕೈಯಸ್ಪ್ ಅಥಾರಿಟಿ ಇರುವ ಕಮೀಷನ್ ನೇಮಕವಾಗಿದೆ. ಅವರು ಬಹಳ ಮಟ್ಟಿಗೆ ವಿಚಾರ ಮಾಡಿ ವರದಿ ಮಾಡಬಹುದು. ಆ ವರದಿ ಬಂದ ಮೇಲೆ ಕೇಂದ್ರ ಸರ್ಕಾರದವರು ಏನು ನಿರ್ಣಯ ಮಾಡುತ್ತಾರೆ ಅನ್ನುವುದನ್ನು ನಾವು ತಡೆದು ನೋಡೋಣ.

ಶ್ರೀಮತಿ ಸುಶೀಲ ಬಾಯಿ ಹೀರಾಚಂದ್ ಷಾ.—ಕಾಂಗ್ರೆಸ್ಸಿನವರೇ ಅಲ್ಲದೆ ಯಾರೇ ಆಗಲಿ, ಅವರಲ್ಲಿ ಎಷ್ಟು ಪ್ರಾಪರ್ಟಿ ಇದೆ, ಅವರಲ್ಲಿ ಎಷ್ಟರಮಟ್ಟಿಗೆ ಲಂಚ ಇದೆ ಎಂದು ಏನಾದರೂ ತಿಳಿದಿದೆಯೇ?

(ಉತ್ತರವಿಲ್ಲ.)

ಶ್ರೀ ಎಸ್. ಶಿವಪ್ಪ.—ನಮ್ಮ ರಾಜ್ಯ ಸರ್ಕಾರದವರು ನಮ್ಮ ರಾಜ್ಯದ ವಿಜಿಲೆನ್ಸ್ ಕಮೀಷನರ್ ಅವರನ್ನು ಹೊರ ದೇಶಕ್ಕೆ ನಮ್ಮ ಖರ್ಚಿನಿಂದ ಕಳುಹಿಸಿ ಸ್ಕಾಂಡಿನೇವಿಯನ್ ದೇಶಗಳಲ್ಲಿ ಕರಪ್ಷನ್ ನಿರ್ಮೂಲ ಮಾಡಲು ಏನು ಪದ್ಧತಿಯನ್ನು ಅನುಸರಿಸುತ್ತಿದ್ದಾರೆ ಎಂದು ತಿಳಿದುಕೊಂಡು ಬಂದು ಇಲ್ಲಿ ಅದರ ನಿವಾರಣೆಗೆ ಉಪಾಯ ವನ್ನು ಕಂಡುಹಿಡಿಯುವುದಕ್ಕೆ ಕಳುಹಿಸಿದ್ದರಲ್ಲವೆ ? ಈಗ ಅವರು ಒಂದು ರಿಪೋರ್ಟನ್ನು ಕೊಟ್ಟಿದ್ದಾರಲ್ಲ, ಆ ರಿಪೋರ್ಟ್ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎನ್ನುವುದನ್ನು ಹೇಳುತ್ತೀರಾ? ಈ ವಿಷಯ ಕೇಂದ್ರ ಸರ್ಕಾರದ ನಿರ್ಣಯವಾಗುವವರೆಗೂ ನಮ್ಮ ರಾಜಕೀಯ ಏನೂ ನಿರ್ಣಯ ಮಾಡುವ ಹಾಗಿಲ್ಲ, ಏನೂ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ವಿಜಿಲೆನ್ಸ್ ಕಮೀಷನ್ ವರದಿಯ ಮೇಲೆ ಸುಮ್ಮನಿರುತ್ತೀರೋ, ಅಥವಾ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರೀ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಶಿವಪ್ಪನವರಿಗೂ ಮತ್ತು ಈ ಸಭೆಗೂ ಸರಿಯಾದ ಪೊಜಿಷನ್ ಹೇಳುವುದು ಯೋಗ್ಯ. ನಮ್ಮ ಖರ್ಚಿನಿಂದ ವಿಜಿಲೆನ್ಸ್ ಕಮೀಷನರು ಹೊರದೇಶಕ್ಕೆ ಹೋಗಿ ಸ್ಟಡಿ ಮಾಡಿ ಕೊಂಡು ಬಂದು ರಿಪೋರ್ಟ್ ಮಾಡಲಿಲ್ಲ. ಅವರನ್ನು ನಾವು ಕಳುಹಿಸಲಿಲ್ಲ. ಅವರು ಬ್ರುಸ್ಸ್‌ಗೆ ಇಂಟರ್-ನ್ಯಾಷನಲ್ ಸ್ಕೌಟ್ ಜಾಂಬೂರಿಗೆ ಹೋಗುತ್ತೇನೆ, ಹಾಗೆಯೇ ಒಂದೆರಡು ದೇಶಗಳನ್ನು ಟೂರ್ ಮಾಡಿ ಕೊಂಡು ಅಲ್ಲಿರುವ ಪದ್ಧತಿಯನ್ನು ಸ್ಟಡಿ ಮಾಡಿಕೊಂಡು ಬರುತ್ತೇನೆ ಎಂದು ಹೇಳಿದರು. ನಾವು ಹೋಗಿ ಬನ್ನಿ ಎಂದು ಹೇಳಿದೆವು. ಅವರು ಹಿಂದಿರುಗಿ ಬಂದ ಮೇಲೆ ಅಲ್ಲಿರುವ ಇನ್‌ಸ್ಟಿಟ್ಯೂಷನ್‌ಗಳು ಯಾವ ರೀತಿ ಕೆಲಸ ಕಾರ್ಯಗಳನ್ನು ಮಾಡುತ್ತಾ ಇದ್ದಾರೆ ಎಂದು ಒಂದು ಪತ್ರವನ್ನು ಕೊಟ್ಟಿದ್ದಾರೆ. ಮತ್ತು ಆ ತರಹ ಇನ್‌ಸ್ಟಿ-ಟ್ಯೂಷನ್ ನಮ್ಮ ದೇಶದಲ್ಲಿ ಇರುವುದು ಒಳ್ಳೆಯದು ಎಂದು ಹೇಳಿದ್ದಾರೆ. ಈಗ ಕೇಂದ್ರ ಸರ್ಕಾರದವರು ಒಂದು ಕಮೀಷನ್ ಮಾಡಿದ್ದಾರೆ. ಹೀಗಿರುವಾಗ ನಾವು ಏನು ಕ್ರಮ ತೆಗೆದುಕೊಳ್ಳಬೇಕೋ ನನಗೆ ಗೊತ್ತಿಲ್ಲ.

SRI R. S. HEGDE.—Apart from the provisions in the Indian Penal Code and Prevention of Corruption Act, is there a concept called political corruption with the Government ?

MR. SPEAKER.—We are discussing the principles of jurisprudence on very, very thin basis. They have got fundamental rights and provisions under the Constitution with regard to what enquiry can be held and what enquiry cannot be held, protection is given to the judicial officers, privileges given to the members and all that. We have to bear in mind this background which is something different from the Ombudsman. A little detailed study of jurisprudence is necessary. It is not a concept that can be easily transplanted. Therefore supplementaries with regard to possibilities, contingencies, future which is uncertain, are unnecessary.

SRI C. J. MUCKANNAPPA.—Did at any time the Central Government invite the opinion of the State Government with reference to the setting up of the Ombudsman ?

SRI VEERENDRA PATIL.—I require notice, Sir.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಿಮ್ಮ ವಿಜಿಲೆನ್ಸ್ ಕಮೀಷನರ್ ಅವರು ಸ್ಕಾಂಡಿನೇವಿಯನ್ ದೇಶಗಳಿಗೆ ಹೋಗಿ ಕೆಲವು ಇನ್‌ಸ್ಟಿಟ್ಯೂಷನ್‌ಗಳನ್ನು ನೋಡಿಕೊಂಡು ಬಂದು ತಮಗೆ ಒಂದು ಪತ್ರ ಬರೆದಿದ್ದಾರೆ ಎಂದು ಹೇಳಿದಿರಿ. ಆ ಇನ್‌ಸ್ಟಿಟ್ಯೂಷನ್‌ಗಳ ರೂಪ ರೇಖೆಗಳೇನು, ವಿಜಿಲೆನ್ಸ್ ಕಮೀಷನರ್ ಕೊಟ್ಟಿರತಕ್ಕಂಥ ಪತ್ರದ ಆಧಾರದ ಮೇಲೆ ಇಲ್ಲಿಯೂ ಅದೇ ತರಹ ಒಂದು ಇನ್‌ಸ್ಟಿಟ್ಯೂಷನ್ ತೆರೆಯುವುದಕ್ಕೆ ಸರ್ಕಾರಕ್ಕೆ ಇರುವ ಕಷ್ಟವೇನು ?

MR. SPEAKER.—Before I admit the question, I would like to give the Hon. Member four books ; I will presently send them from the Library. Let him study them first. Without knowing the difficulty, if he expects answers on supplementaries, it is not going to improve matters.

SRI C. J. MUCKANNAPPA.—Because the Hon'ble Minister said that there is such an institution in Scandinavia and Norwegian other countries, I asked the question. I want to know what are the main functions of that institution ? How are people educated in this direction ? Should we not have an institution of that kind in our State, Sir ?

SRI VEERENDRA PATIL.—That question—whether we should have it or not, is before the Government of India.

SRI G. V. GOWDA.—Is it not the duty of the Government to see that steps are taken to root out corruption ? Government have appointed the Vigilance Commissioner to advise them. He has returned from foreign countries after study. If he feels that the Ombudsman institution can wipe out corruption, why not the Government accept it.

MR. SPEAKER.—The Member need not put wrong premise saying that he was appointed for the purpose of advising Government and all that. The question put by the Hon'ble Member is : why should the State Government wait till the Central Government comes to a conclusion.

SRI VEERENDRA PATIL.—Because it is too big a policy question and it is under the active consideration of the Government of India. In order to have a uniform procedure throughout the country, it is better to leave this matter to the Government of India.

SRI C. J. MUCKANNAPPA.—Will it come under the concurrent list under the Constitution ?

MR. SPEAKER.—It is the considered opinion of this Government that we shall have the benefit of the study made by the Central Government.

SRI K. H. RANGANATH.—Is Corruption in the Central List ?

MR. SPEAKER.—It is disallowed.

ಶ್ರೀ ಎಸ್. ಶಿವಪ್ಪ.—ರಾಜ್ಯ ಸರಕಾರದವರು ರಾಜ್ಯದಲ್ಲಿರುವ ಭ್ರಷ್ಟಾಚಾರವನ್ನು ನಿಲ್ಲಿಸಲು ಒಂದು ವರದಿ ಬಂದಿದೆ ಎಂದು ಹೇಳಿದರು. ಆದರಂತೆ ಸರಕಾರದವರು ಏನಾದರೂ ಕಾರ್ಯಕ್ರಮಗಳನ್ನು ಆ ವರದಿಯ ಮೇಲೆ ತೆಗೆದುಕೊಳ್ಳಲು, ಕೇಂದ್ರ ಸರಕಾರ ನೀವು ತೆಗೆದುಕೊಳ್ಳಬೇಡಿ ಎಂದೇನಾದರೂ ಅಭಿಪ್ರಾಯ ಕೊಟ್ಟಿದ್ದಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಅದರ ಬಗ್ಗೆ ನಾನು ಏನೂ ಹೇಳುವಂತಿಲ್ಲ ಎಂದು ನಾನು ಆಗಲೇ ಹೇಳಿದೆ.

ಶ್ರೀ ಎಸ್. ಗೋಪಾಲ ಗೌಡ.—ರಾಜ್ಯ ಸರಕಾರದ ಮಂತ್ರಿಮಂಡಲದ ಮೇಲೆ ಕೆಲವು ಶಾಸಕರುಗಳು ಕೆಲವು ಆಪಾದನೆಗಳನ್ನು ಹೊರಿಸಿ ರಾಷ್ಟ್ರಾಧ್ಯಕ್ಷರಿಗೆ ಸಲ್ಲಿಸಿದ್ದರು. ಆ ಆಪಾದನೆಗಳ ವಿಚಾರಣೆ ನಡೆಸುವುದರ ಬಗ್ಗೆ ಅಥವಾ ಬೇರೆ ಯಾವ ರೀತಿಯಿಂದಲಾದರೂ ವಿಚಾರ ಮಾಡಬೇಕು ಎನ್ನುವುದರ ಬಗೆಗೆ ಅವರಿಂದೇನಾದರೂ ಉತ್ತರ ಬಂದಿದೆಯೇ ?

MR. SPEAKER.—It is disallowed as it is not a proper supplementary to this question.

ಶ್ರೀ ಹೆಚ್. ಆರ್. ಕೇಶವಮೂರ್ತಿ.—ಪ್ರಜಾಪ್ರಭುತ್ವದಲ್ಲಿ ಸಾಮಾನ್ಯವಾಗಿ ಲಂಚವನ್ನು ಕೊಟ್ಟುಕೊಂಡು ವೋಟು ತೆಗೆದುಕೊಂಡು ಸರಕಾರದೊಳಕ್ಕೆ ಬರುತ್ತಿರುವುದರಿಂದ ಸರಕಾರ ಈ ಲಂಚರುಷುವತ್ತುಗಳನ್ನು ನಿಲ್ಲಿಸಲು ಸಾಧ್ಯವೇ ಇಲ್ಲ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ?

MR. SPEAKER.—It is disallowed.

ಶ್ರೀ ಎಸ್. ಗೋಪಾಲಗೌಡ.—ನಾನು ಕೇಳಿದ ಉಪ ಪ್ರಶ್ನೆಯನ್ನು ಪ್ರಿವಿಲೇಜು ಕಮಿಟಿಯವರಿಗೆ ಕಳುಹಿಸಲು ಅವಕಾಶ ಮಾಡಿಕೊಡಬೇಕೆಂದು ಕೇಳುತ್ತೇನೆ,

MR. SPEAKER.—Not during the Question Hour. If he wants I will give him a copy of the Rules of Procedure.

ಶ್ರೀ ಎಸ್. ಗೋಪಾಲ ಗೌಡ.—ನನ್ನ ಪ್ರಶ್ನೆ ಎಂದರೆ ಉಪ ಪ್ರಶ್ನೆ ಹೇಗೆ ಇಲ್ಲಿ ಬರುವುದಿಲ್ಲ ಎನ್ನುವುದನ್ನು ತಿಳಿಯಲೋಸುಗ ಇದನ್ನು ಪ್ರಿವಿಲೇಜು ಕಮಿಟಿಗೆ ಕಳುಹಿಸಲು ಅವಕಾಶ ಕೊಡಬೇಕು.

MR. SPEAKER.—The Hon. Member is making a request which is untenable. Let him follow the procedure.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ವಿಜಿಲೆನ್ಸ್ ಕಮೀಷನರು ಪರದೇಶಕ್ಕೆ ಹೋಗಿ ಬಂದ ಮೇಲೆ ಅಲ್ಲಿರುವ ಭ್ರಷ್ಟಾಚಾರಗಳ ವಿವರಗಳನ್ನೆಲ್ಲಾ ತಿಳಿದು ಬಂದು ರಾಜಕೀಯ ಭ್ರಷ್ಟಾಚಾರಗಳನ್ನು ತಡೆಯಲು ಸಾಧ್ಯವಿಲ್ಲ ಎಂದು ಪತ್ರಿಕೆಗಳಲ್ಲಿ ಭಷ್ಟಾಚಾರದ ಬಗ್ಗೆ ಹೇಳಿಕೆ ಕೊಟ್ಟಿರುವುದು ನಿಜವೇ ?

ಶ್ರೀ ವೀರೇಂದ್ರ ಪಾಟೀಲ್.—ಅದು ನನಗೆ ಗೊತ್ತಿಲ್ಲ. ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ ಆಗ ಏನಾದರೂ ಹೇಳಬಹುದು. ಇಲ್ಲದಿದ್ದರೆ ಹೇಳುವುದಕ್ಕೆ ಆಗುವುದಿಲ್ಲ

———

Taking over of Dadinayakanadoddi Road to Public Works Department.

*Q.—139. SRI S. V. RAME GOWDA (Malur).—

Will the Government be pleased to state:—

(*a*) whether the proposal of taking over nine miles of road of Dadinayakanadoddi in Malur Taluk to Public Works Department is pending for the last three years ;

(*b*) if so, whether the same would be taken over by the Public Works Department, during 1966 and metalled ?

A.—SRI G. B. SHANKAR RAO (Parliamentary Secretary to the Minister for Public Works).—

(*a*) Yes.

(*b*) This will be considered subject to availability of funds.

ಶ್ರೀ ಎಸ್. ವಿ. ರಾಮೇಗೌಡ.—ಈ ಪ್ರಶ್ನೆ ಸುಮಾರು ಮೂರು ವರ್ಷಗಳಿಂದಲೂ ಪೆಂಡಿಂಗ್ ಆಗಿರುವುದು ಗೊತ್ತಿಲ್ಲವೇ ?

ಶ್ರೀ ಜಿ. ಬಿ. ಶಂಕರರಾವ್.—ಈಗ್ಗೆ ಎರಡು ವರ್ಷಗಳ ಹಿಂದೆಯೇ ಮಾನ್ಯ ಸದಸ್ಯರು ಒಂದು ಕಾಗದ ಬರೆದಿದ್ದರು. ಎರಡು ರೋಡುಗಳನ್ನು ಪಿ. ಡಬ್ಲ್ಯು. ಡಿ. ಗೆ ತೆಗೆದುಕೊಳ್ಳಬೇಕೆಂದು ಬರೆದಿದ್ದರು. ಎರಡು ಇದರಲ್ಲಿ ಈಗಾಗಲೇ ಒಂದು ರಸ್ತೆಯನ್ನು ಪಿ. ಡಬ್ಲ್ಯು. ಡಿ.ಗೆ ತೆಗೆದುಕೊಂಡಿದ್ದಾಗಿದೆ.

ಶ್ರೀ ಎಸ್. ವಿ. ರಾಮೇಗೌಡ.—ಈ ರಸ್ತೆಗಳ ಸ್ಥಿತಿ ಸರಿಯಾಗಿಲ್ಲದೇ ಇರುವ ಕಾರಣದಿಂದ ಇಲ್ಲಿ ಮೂರು ಬಸ್ಸುಗಳು ಓಡಾಡುತ್ತಿದ್ದವು. ಈಗ ನಿಂತು ಹೋಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?